ಶ್ರೀ ಸಾಯಿರಾಮ ಸ್ಟೋನ್ ಕ್ರಷರ್, ರವರು, ಪಟ್ಟಾ ಭೂಮಿಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆ ಮಾಡಲು ಸರ್ವೆ ನಂ. 8/3, 8/6, 4/1, 4/2, 4/11, 4/3, ವಜ್ರಬಂಡಿ- ಗ್ರಾಮ, ಯಲಬುರ್ಗಾ-ತಾಲ್ಲೂಕು, ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 12.00 ಎಕರೆ (4.856 ಹೆಕ್ಟೇರ್) ಪ್ರದೇಶದಲ್ಲಿ ವರ್ಷಕ್ಕೆ 5,01,910 ಟನ್‌ಗಳಷ್ಟು ತೆರೆದ ಮತ್ತು ಸೆಮಿ ಮೆಕ್ಯಾನೈಜಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುವುದಕ್ಕೆ ಸಂಬಂಧಿಸಿದಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಸ್ಥಾಪನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

ದಿನಾಂಕ : 11.10.2022

ವೇಳೆ : ಬೆಳಗ್ಗೆ 11.00 ಘಂಟೆ,

ಸ್ಥಳ : ಉದ್ದೇಶಿತ ಯೋಜನೆಯ ಪ್ರದೇಶ, ಶ್ರೀ ಸಾಯಿರಾಮ ಸ್ಟೋನ್ ಕ್ರಷರ್,
ಸರ್ವೆ ನಂ. 8/3, 8/6, 4/1, 4/2, 4/11, 4/3,
ವಜ್ರಬಂಡಿ- ಗ್ರಾಮ, ಯಲಬುರ್ಗಾ-ತಾಲ್ಲೂಕು,
ಕೊಪ್ಪಳ ಜಿಲ್ಲೆ

ಮೆ॥ ಶ್ರೀ ಸಾಯಿರಾಮ ಸ್ಟೋನ್ ಕ್ರಷರ್, ರವರು, ಜಿಲ್ಲೆಯಲ್ಲಿ ಒಟ್ಟು 12.00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 5,01,910 ಟನ್‌ಗಳಷ್ಟು ತೆರೆದ ಮತ್ತು ಸೆಮಿ ಮೆಕ್ಯಾನೈಜಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 11.10.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಶ್ರೀ ಸಾಯಿರಾಮ ಸ್ಟೋನ್ ಕ್ರಷರ್,<br>ಸರ್ವೆ ನಂ. 8/3, 8/6, 4/1, 4/2, 4/11, 4/3,<br>ವಜ್ರಬಂಡಿ- ಗ್ರಾಮ, ಯಲಬುರ್ಗಾ-ತಾಲ್ಲೂಕು,<br>ಕೊಪ್ಪಳ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು(PPT) | : | ಅನುಬಂಧ-5 |
| ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಕ್ರಿಯೆಯ ಛಾಯಾ ಚಿತ್ರಗಳು | : | ಅನುಬಂಧ-6 |

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು. : ಅನುಬಂಧ-7

ಸಾರ್ವಜನಿಕರು/ಪರಿಸರಾಸಕ್ತ ಸಂಪನ್ಮೂಲವ್ಯಕ್ತಿಗಳುಸಲ್ಲಿಸಿದ ಅಹವಾಲುಗಳು : ಅನುಬಂಧ-8

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ: 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ:SG/KPL/DMG/GL/NTN-13/202-21/1401 ದಿನಾಂಕ:13.07.2021ರಂದು "ಸೆಮಿ ಮೆಕ್ಯಾನೈಜಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯ" ಯೋಜನೆಯನ್ನು ಅನುಮೋದಿಸಿ, ಒಟ್ಟು 12 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 5,01,910 ಟನ್‌ಗಳಷ್ಟು ಸಾಮರ್ಥ್ಯದ ತೆರೆದ ಮತ್ತು ಸೆಮಿ ಮೆಕ್ಯಾನೈಜಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯ ಉತ್ಪಾದನೆಯ ಯೋಜನೆಯನ್ನು ಹೊಂದಿದೆ. (ಕ್ವಾರಿ ಯೋಜನೆಯ ಅವಧಿ 7 ವರ್ಷ). ಕ್ವಾರಿ ಯೋಜನೆಯನ್ನು ಅನುಮೋದಿಸಿ ವರ್ಷಕ್ಕೆ 35,13,370 ಟನ್‌ಗಳಷ್ಟು ಸಾಮರ್ಥ್ಯದ ತೆರೆದ ಮತ್ತು ಸೆಮಿ ಮೆಕ್ಯಾನೈಜಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯ ಉತ್ಪಾದನೆಯ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಎ ಅಧಿಸೂಚನೆ ದಿನಾಂಕ: 14-09-2006 ರ ಪ್ರಕಾರ ಈ ಗಣಿಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆದಾರದ ಮೇಲೆ ಸದರಿ ಯೋಜನೆಯ Standards Terms of Reference ಅನ್ನು ದಿನಾಂಕ: 19.01.2022 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಕೋರಿರುವಂತೆ ಶ್ರೀ ಸಾಯಿರಾಮ ಸ್ಟೋನ್ ಕ್ರಷರ್, ಇವರು ತಿಳಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಮತ್ತು ಸಮಯವನ್ನು ನೀಡಲು ದಿನಾಂಕ:-26.08.2022 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 11.10.2022 ರಂದು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ.

ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ '' ಕನ್ನಡ ಪ್ರಭ''' (ಕನ್ನಡ) ''ಡೆಕ್ಕನ್ ಹೆರಾಲ್ಡ್'' (ಆಂಗ್ಲ ಭಾಷೆ) ಗಳಲ್ಲಿ ದಿನಾಂಕ: 25.09.2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಪರ ದಂಡಾಧಿಕಾರಿಗಳು, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 11.10.2022ರಂದು, ಬೆಳಿಗ್ಗೆ.11.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎಸ್ ಸಿ ಸುರೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಶ್ರೀಮತಿ ಸಾವಿತ್ರಿ ಬಿ ಕಡಿ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಕೊಪ್ಪಳ ಕೊಪ್ಪಳ ಜಿಲ್ಲೆ ಮತ್ತು ಶ್ರೀ ಶ್ರೀಶೈಲ್ ವಾಯ್ ತಹಶೀಹಲ್ದಾರು , ಕಂದಾಯ ನೀರಿಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಯಲಬುರ್ಗಾ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸ್ವಾಗತಿಸಿದರು, ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಎಂಟು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಶ್ರೀ ಅಶ್ವಥ್ ನಾರಾಯಣ್ ಎಮ್ ಎಸ್, ಎನ್‌ವಿಪ್ರೋ ಸೋಲ್ಯೂಶನ್ ಪ್ರೈ.ಲಿ. ಬೆಂಗಳೂರು ಇವರು ಸದರಿ ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು (ppt) ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

- ಶ್ರೀ. ಶರಣಗೌಡ ಪೋಲೀಸ್ ಪಾಟೀಲ್, ವಜ್ರಬಂಡಿ-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.
    1. ವಜ್ರಬಂಡಿ-ಗ್ರಾಮದ ಪಕ್ಕದಲ್ಲಿ ಯಾವುದೇ ಗ್ರಾಮಸ್ಥರಿಗೆ ತೊಂದರೆಯಾಗಂತೆ, ಕಲ್ಲು ಗಣಗಾರಿಕೆಯ ಪ್ರಾರಂಭ ಮಾಡುವುದರಿಂದ ನಮಗೆ ಅಭ್ಯಂತರವಿರುವುದಿಲ್ಲ.

2. ವಜ್ರಬಂಡಿ-ಗ್ರಾಮದ ರೈತರಿಗೆ ಯಾವುದೇ ತರಹದ ತೊಂದರೆಯಾಗದಂತೆ ಕಲ್ಲು ಗಣಗಾರಿಕೆ ನಡೆಸಬೇಕು.
3. ವಜ್ರಬಂಡಿ-ಗ್ರಾಮದಲ್ಲಿ ಕಲ್ಲು ಗಣಗಾರಿಕೆಯ ಘಟಕದಲ್ಲಿ ವಜ್ರಬಂಡಿ-ಗ್ರಾಮದ ಗ್ರಾಮಸ್ಥರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವಂತೆ ಕೇಳಿಕೊಂಡರು.
4. ವಜ್ರಬಂಡಿ-ಗ್ರಾಮದಲ್ಲಿ ಕಲ್ಲು ಗಣಗಾರಿಕೆಯ ಘಟಕವನ್ನು ಸ್ಥಾಪಿಸುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯವನ್ನು ಸಹ ಗಳಿಸಬಹುದಾಗಿರುತ್ತದೆ.
5. ವಜ್ರಬಂಡಿ-ಗ್ರಾಮದಲ್ಲಿ ಕಲ್ಲು ಗಣಗಾರಿಕೆಯ ಘಟಕವನ್ನು ಸ್ಥಾಪಿಸಿ ಅದರಿಂದ ಬರುವ ಆದಾಯದಲ್ಲಿ ಕೊಪ್ಪಳ ಜಿಲ್ಲೆಯು ಹೈದ್ರಾಬಾದ್ ಕರ್ನಾಟಕ ಪ್ರದೇಶವಾಗಿರುವುದರಿಂದ ಶೈಕ್ಷಣಿಕವಾಗಿ ಅನುಕೂಲವನ್ನು ಮಾಡಿ ಕೊಡುವಂತೆ ತಿಳಿಸಿದರು.
6. ವಜ್ರಬಂಡಿ-ಗ್ರಾಮದಲ್ಲಿ ಕಲ್ಲು ಗಣಗಾರಿಕೆಯ ಘಟಕವನ್ನು ಸ್ಥಾಪಿಸುವುದಕ್ಕೆ ನನ್ನ ಸಹಕಾರ ಇದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

- ಶ್ರೀ. ಶಂಕ್ರಪ್ಪ ರೈತ ಸಂಘದ ಜಿಲ್ಲಾ ಅಧ್ಯಕ್ಷರು, ವಜ್ರಬಂಡಿ-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.
  1. ವಜ್ರಬಂಡಿ-ಗ್ರಾಮದಲ್ಲಿ ಕಲ್ಲು ಗಣಿಗಾರಿಕೆಯ ಘಟಕವನ್ನು ಸ್ಥಾಪಿಸುವುದರಿಂದ ಪಕ್ಕದಲ್ಲಿ ಶಾಲೆ ಇರುತ್ತದೆ, ಚಿಕ್ಕ ಮಕ್ಕಳು ಓಡಾಡುತ್ತಿರುತ್ತಾರೆ ಇದರಿಂದ ಶಾಲಾಮಕ್ಕಳಿಗೆ ತೊಂದರೆಯಾಗುತ್ತದೆ.
  2. ವಜ್ರಬಂಡಿ-ಗ್ರಾಮದಲ್ಲಿ ಕಲ್ಲು ಗಣಿಗಾರಿಕೆಯ ಘಟಕವನ್ನು ಸ್ಥಾಪಿಸುವುದರಿಂದ ವಿಪರೀತ ಧೂಳು ಬರುತ್ತದೆ ಎಂದು ತಿಳಿಸಿದರು.
  3. ಈಗಾಗಲೇ ಇಲ್ಲಿ ಒಂದು ಕ್ರಷರ್ ಘಟಕ ಇದ್ದು, ಅದರಿಂದ ಧೂಳು ಬರುತ್ತರುತ್ತದೆ ಅದನ್ನು ಕಡಿಮೆ ಮಾಡಿ ಎಂದು ಕೇಳಿದಾಗ ಇಲ್ಲಿಯವರೆಗೂ ಅದನ್ನು ಕಡಿಮೆ ಮಾಡಿರುವುದಿಲ್ಲ ಎಂದು ತಿಳಿಸಿದರು.
  4. ವಾಹನಗಳ ಓಡಾಟಗಳಿಂದ ಹಾಗೂ ಈ ಘಟಕದಿಂದ ಬರುವ ಶಬ್ದದಿಂದ ಶಾಲೆಯಲ್ಲಿ ಓದುತ್ತೀರುವ ಮಕ್ಕಳಿಗೆ ಶಬ್ದಮಾಲಿನ್ಯದಿಂದ ತೊಂದರೆ ಉಂಟಾಗುತ್ತದೆ.
  5. ಧೂಳು ಬರುತ್ತಿರುವುದರ ಬಗ್ಗೆ ಯಾರಾದರೂ ತಿಳಿಸಿದರೆ ಮಾತ್ರ ಆಗಿನ ಕ್ಷಣಕ್ಕೆ ಅದನ್ನು ನೀರಿನಿಂದ ಸಿಂಪಡಿಸುತ್ತಾರೆ ಮತ್ತೇ ಅದೇ ರೀತಿಯಾದ ಧೂಳು ಬರುತ್ತದೆ ಎಂದು ತಿಳಿಸಿದರು.

- ಶ್ರೀ. ಯಲ್ಲಪ್ಪ ಹಳ್ಳಿಗುಡಿ, ವಜ್ರಬಂಡಿ -ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

  1. ವಜ್ರಬಂಡಿ-ಗ್ರಾಮದಲ್ಲಿ ಈಗಾಗಲೇ ಒಂದು ಕ್ವಾರಿ ಇರುತ್ತದೆ, ಆ ಕ್ವಾರಿಯನ್ನು ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ನಮ್ಮನ್ನು ಕೇಳಿಕೊಂಡಾಗ ನಾವು ಒಪ್ಪಿಕೊಂಡು ಸಮ್ಮತಿಯನ್ನು ನೀಡಿದ್ದೇವೆ, ಅದೇ ರೀತಿಯಾಗಿ ಈ ಕ್ವಾರಿಗೂ ಸಹ ನನ್ನ ಸಮ್ಮತಿ ಇರುತ್ತದೆ ಎಂದು ವ್ಯಕ್ತಪಡಿಸಿದರು.

- ಶ್ರೀ. ರೇವಣೆಪ್ಪ ಮಾಗನೂರ, ವಜ್ರಬಂಡಿ -ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

  1. ವಜ್ರಬಂಡಿ-ಗ್ರಾಮದಲ್ಲಿ ಕ್ವಾರಿ ಗಣಿಗಾರಿಕೆ ಇರುತ್ತದೆ ಈ ಕ್ವಾರಿಯಲ್ಲಿ ಕೆಲಸವನ್ನು ಮಾಡುತ್ತಿದ್ದು ಇದರಿಂದ ನಮ್ಮ ಜೀವನ ನಡೆಯುತ್ತಿದೆ ಎಂದು ತಿಳಿಸಿದರು.

2. ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಮಾಡಿ ಕೊಟ್ಟರೆ ಕ್ವಾರಿ ನಡೆಸಲು ಅವಕಾಶ ಮಾಡಿಕೊಡುತ್ತೇವೆ, ಎಂದು ತಿಳಿಸಿದರು.

- ಶ್ರೀಮತಿ ಮಂಜುಳಾ, ಜಿ.ಕೆ. ಎಜುಕೇಶನ್ & ರೂರಲ್ ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ (ರಿ) ಸಂಸ್ಥೆ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

1. ಸದರಿ ಗ್ರಾಮಸ್ಥರಿಗೆ ಆರೋಗ್ಯ ಶಿಬಿರಗಳನ್ನು ನಡೆಸುವುದು ಮತ್ತು ಆರೋಗ್ಯ ಮುನ್ನೇಚ್ಚರಿಕಾ ಉಪಕರಣಗಳನ್ನು ನೀಡುವುದು.
2. ಕ್ವಾರಿ ಗಣಿಗಾರಿಕೆಯನ್ನು ನಡೆಸಲು ನಮ್ಮ ಬೆಂಬಲ ಇರುತ್ತದೆ.
3. ನಿರುದ್ಯೋಗವನ್ನು ನಿರ್ಮೂಲನೆ ಮಾಡಲು ಇಂತಹ ಉದ್ದಿಮೆಗಳು ಬೇಕು,
4. ಕ್ವಾರಿ ಗಣಿಗಾರಿಕೆ ನಡೆಸುವುದರಿಂದ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರು.
5. ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
6. ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.

- ಶ್ರೀ ಆರ್ ಎಸ್ ಎಸ್ ಕುಮಾರ್, ಶಾಲಿನಿ ಎನ್‌ವಿರಾನ್‌ಮೆಂಟ್ ಎಜುಕೇಶನ್ ಸೊಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

1. ಕ್ವಾರಿಯನ್ನು ಪ್ರಾರಂಭಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.
2. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ನು ಅನುಸರಿಸುವಂತೆ ತಿಳಿಸಿದರು.
3. ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
4. ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.
5. ಕ್ವಾರಿ ಗಣಿಗಾರಿಕೆ ನಡೆಸುವುದರಿಂದ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರು.
6. ಸದರಿ ಗ್ರಾಮಸ್ಥರಿಗೆ ಆರೋಗ್ಯ ಶಿಬಿರಗಳನ್ನು ನಡೆಸುವುದು ಮತ್ತು ಆರೋಗ್ಯ ಮುನ್ನೇಚ್ಚರಿಕಾ ಉಪಕರಣಗಳನ್ನು ನೀಡುವುದು.

- ಶ್ರೀಮತಿ ಕೆ. ಶಾಮಲಾ ದೇವಿ – ಸಂಯೋಜಕರು, ಮಿನಾಕ್ಷಿ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

1. ಸಿ.ಎಸ್.ಆರ್ ನಿಯಮಗಳಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
2. ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
3. ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.
4. ಕ್ವಾರಿಯನ್ನು ಪ್ರಾರಂಭಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.

- ಶ್ರೀ ಬಿ ವೆಂಕಟೇಶ್ ಹರಿತಾ ಎಜುಕೇಶನಲ್ ರೂರಲ್ ಸೊಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

1. ಸಿ.ಎಸ್.ಆರ್ ನಿಯಮಗಳಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
2. ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.

3. ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಉಪಯೋಗಿಸುವುದು.

- ಶ್ರೀ. ಆಂಜನೇಯಾ ನಾಗೇನಹಳ್ಳಿ, ಸಮಗ್ರ ಪರಿವರ್ತನಾ ಸಮುದಾಯ (ಎಸ್.ಪಿ.ಎಸ್) ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

  1. ಸದರಿ ಕ್ವಾರಿಯನ್ನು ನಾವು ಸ್ವಾಗತಿಸುತ್ತೇವೆ.
  2. ಸಿ.ಎಸ್.ಆರ್ ನಿಯಮಗಳಲ್ಲಿ ಸ್ಥಳೀಯರಿಗೆ ಉಪಯೋಗವಾಗುತ್ತದೆ ಮತ್ತು ಗ್ರಾಮದ ಸುಧಾರಣೆಗೆ ಸಹಾಯವನ್ನು ಮಾಡುವುದು.

- ಶ್ರೀ. ರಂಗರಾವ್ ಕೋಥಾಕೊಂಡ, ಸೇವಾ ಅರ್ಥ್ ಮೆಟ್ರೋ ಅರ್ಬನ್ & ರೂರಲ್ ಡೆವಲಪ್‌ಮೆಂಟ್ ಸೋಸೈಟಿ (ರಿ) ಸಂಸ್ಥೆ , ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

  1. ಕ್ವಾರಿ ಇರುವ ಸ್ಥಳದಲ್ಲಿ ಮಳೆ ನೀರನ್ನು ಸಂಗ್ರಹಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು.
  2. ಸದರಿ ಕ್ವಾರಿಯನ್ನು ನಾವು ಸ್ವಾಗತಿಸುತ್ತೇವೆ.
  3. ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
  4. ಗ್ರಾಮದ ಅಕ್ಕಪಕ್ಕದ ರಸ್ತೆಗಳ ಪಕ್ಕದಲ್ಲಿ ಹಣ್ಣಿನ ಗಿಡಗಳು ಮತ್ತು ಔಷಧಿಯ ಗಿಡಗಳನ್ನು ಬೆಳೆಸಲು ಮಹತ್ವ ನೀಡುವುದು.
  5. ಸದರಿ ಗ್ರಾಮಸ್ಥರಿಗೆ ಆರೋಗ್ಯ ಶಿಬಿರಗಳನ್ನು ನಡೆಸುವುದು.
  6. ಗ್ರಾಮಸ್ಥರಲ್ಲಿ ಜಾಗೃತಿಯನ್ನು ಮೂಡಿಸುವುದು.

ಸಮಾಲೋಚಕರು: ಅಶ್ವಥ್ ನಾರಾಯನ್ ಎಮ್ ಎಸ್

- ಈ ಹಿಂದೆ ಮಾಡಿರುವಂತಹ ಕ್ವಾರಿಗಳಿಗೆ ಹೆಚ್ಚು ಕಾಳಜಿ ವಹಿಸುತ್ತಿರಲ್ಲಿಲ್ಲ, ಆದರೆ ಈಗ ಕ್ವಾರಿಗಳನ್ನು ಸ್ಥಾಪಿಸಲು ಪರಿಸರ ಅನುಮತಿ ಪಡೆದುಕೊಳ್ಳಬೇಕು. ಇದು ಕ್ವಾರಿಯ ಯೋಜನೆಯಾಗಿರುತ್ತದೆ. ಅನುಮತಿ ಪಡೆದ ನಂತರ ಪ್ರತಿ 06 ತಿಂಗಳಿಗೊಮ್ಮೆ ಅನುಸರಣ ವರದಿ (Compliance Report) ನ್ನು ಪರಿಸರ ಇಲಾಖೆ, ಇಸಿ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿರುತ್ತದೆ ಆ ವರದಿಯನ್ನು ಪರೀಶಿಲಿಸಿ ವರದಿಯಲ್ಲಿ ಏನಾದರೂ ನ್ಯೂನ್ಯತೆಗಳು ಕಂಡುಬಂದಲ್ಲಿ ಸ್ಥಳ ಪರಿವೀಕ್ಷಣೆಯನ್ನು ನಡೆಸಿ ಕ್ರಮ ತೆಗೆದುಕೊಳ್ಳಲಾಗುವುದು.
- ದಿನಾಲೂ ಟ್ಯಾಂಕರ್ ನಿಂದ ನೀರನ್ನು ರಸ್ತೆಗಳ ಮೇಲೆ ಸಿಂಪಡಿಸಲಾಗುವುದು ಮತ್ತು ಧೂಳನ್ನು ಬಾರದಂತೆ ನಿಯಂತ್ರಿಸುವುದು ಎಂದು ತಿಳಿಸಿದರು.
- ಟ್ಯಾಂಕರ್ ನಿಂದ ನೀರನ್ನು ರಸ್ತೆಗಳ ಮೇಲೆ ಸಿಂಪಡಿಸುವ ಕೆಲಸವನ್ನು ಸ್ಥಳೀಯ ಗ್ರಾಮಸ್ಥರಿಗೆ ನೀಡಲಾಗುವುದು.
- ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯ ನಿಯಮಗಳಿಗನುಸಾರವಾಗಿ ಉದ್ದೇಶಿತ ಕ್ವಾರಿಯು 200ಮೀಟರ್‌ಗಿಂತ ಹೆಚ್ಚು ದೂರದಲ್ಲಿರುತ್ತದೆ.
- ಸದರಿ ಘಟಕದಿಂದ ಬರುವ ಶಬ್ದದ ಕುರಿತು ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯ ವತಿಯಿಂದ ಕೆಲವೊಂದು ನಿಯಮಗಳನ್ನು ನಿಬಂಧನೆಗಳನ್ನು ಹಾಕಿಕೊಂಡಿರುತ್ತಾರೆ.
- ಕ್ವಾರಿ ಘಟಕವನ್ನು ಸ್ಥಾಪಿಸುವುದರ ಕುರಿತು ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯವರು ಮತ್ತು ಕಂದಾಯ ಇಲಾಖೆಯಿಂದ ನೀರಪೇಕ್ಷಣಾ (NOC) ಪತ್ರವನ್ನು ಪಡೆದುಕೊಂಡಿರುತ್ತಾರೆ.

- ಸದರಿ ಕ್ವಾರಿ ಘಟಕವನ್ನು ಸ್ಥಾಪಿಸುವುದಕ್ಕಿಂತ ಮುಂಚೆ ಯಾವುದೇ ಸಾರ್ವಜನಿಕ ಕಟ್ಟಡಗಳು ಇರುವುದಿಲ್ಲ ಎಂದು ನಿಗದಿಪಡಿಸಿಕೊಂಡ ನಂತರವೇ ನಿರಪೇಕ್ಷಣಾ (NOC) ಪತ್ರವನ್ನು ನೀಡಿರುತ್ತಾರೆ.
- ಸುತ್ತಲೂ 2-3 ಕೀ ಮಿ ದೂರದಲ್ಲಿ ಯಾವುದೇ ಗ್ರಾಮ ಇಲ್ಲದಿರುವ ಸ್ಥಳದಲ್ಲಿ ಬ್ಲಾಸ್ಟಿಂಗ್ ಕಾರ್ಯವನ್ನು ಮಾಡುತ್ತಾರೆ.
- 110 ಎಂ ಎಂ ಮತ್ತು 06 ಮೀಟರ್ ಆಳದ ವರೆಗೆ ಮಾತ್ರ ಬ್ಲಾಸ್ಟಿಂಗ್‌ಅನ್ನು ಮಾಡುತ್ತೇವೆ.
- 20 ರಿಂದ 30 ಜನರಿಗೆ ಕೌಶಲ್ಯ ಮತ್ತು ಅರೇಕೌಶಲ್ಯದಡಿಯಲ್ಲಿ ಉದ್ಯೋಗಾವಕಾಶವನ್ನು ಸ್ಥಳೀಯರಿಗೆ ಅವರ ವಿಧ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ಒದಗಿಸಿಕೊಡುವಂತೆ ತಿಳಿಸಿದರು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷರುಗಳು ಪರಿಸರ ಅಧಿಕಾರಿಗಳಿಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ಹೇಳಿಕೆಗಳನ್ನು ಕ್ರೂಡಿಕರಿಸಿ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನಡುವಳಿಗಳನ್ನು ತಯಾರಿಸಲು ಸೂಚಿಸಿದರು ಮತ್ತು ಅಪರ ಜಿಲ್ಲಾಧಿಕಾರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸುತ್ತಾ ಸಾರ್ವಜನಿಕ ಆಲಿಕೆ ಸಭೆಯನ್ನು ಮುಕ್ತಾಯಗೊಳಿಸಿ ನಡುವಳಿಗಳನ್ನು ಮಂಡಳಿಯ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದರು.

(ಶ್ರೀಮತಿ ಸಾವಿತ್ರಿ ಬಿ ಕಡಿ ಕ.ಆ.ಸೇ )
ಅಪರ ಜಿಲ್ಲಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು ಕೊಪ್ಪಳ,